## ನಿಮ್ಮೊಡನೆ

# ಗೆದ್ದ ಭಾರತೀಯ ಐ.ಟಿ ಲಾಬಿ

ಅಮೆರಿಕಾದ ಕಂಪೆನಿಗಳು ಭಾರತ ಮತ್ತಿತರ ದೇಶಗಳಿಗೆ ಹೊರಗುತ್ತಿಗೆ ಉದ್ಯೋಗಗಳನ್ನು ಕೊಡುವುದಕ್ಕೆ ಕಡಿವಾಣ ಹಾಕುವ ಅಧ್ಯಕ್ಷ ಬರಾಕ್ ಒಬಾಮ ಪ್ರಯತ್ನಕ್ಕೆ ಹಿನ್ನಡೆಯಾಗಿದೆ. ಭಾರತದ ಮಟ್ಟಿಗೆ ಇದು ಮಹತ್ವದ ಬೆಳವಣಿಗೆ. ಹೊರಗುತ್ತಿಗೆ ಉದ್ಯೋಗನೀಡುವ ಅಮೆರಿಕಾದ ಕಂಪೆನಿಗಳಿಗೆ ತೆರಿಗೆ ವಿನಾಯಿತಿ ನಿರಾಕರಿಸುವ ಮಸೂದೆ ಸೆನೆಟ್‌ನಲ್ಲಿ ಬಿದ್ದುಹೋಗಿದೆ. ವಿದೇಶಿಯರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಮತ್ತು ಎಚ್–1ಬಿ ಹಾಗೂ ಎಲ್–1 ವೀಸಾ ದುರ್ಬಳಕೆ ಮಾಡುವುದನ್ನು ತಡೆಯುವ ಎರಡು ತಿದ್ದುಪಡಿಗಳಿಗೆ ಒಪ್ಪಿಗೆ ಸಿಕ್ಕಿಲ್ಲ. ಈ ತಿದ್ದುಪಡಿಗಳಿಗೆ ಸ್ವತಃ ಡೆಮಾಕ್ರಟಿಕ್ ಪಕ್ಷದ ಸದಸ್ಯರೇ ಅಡ್ಡಿಯಾದರು ಎಂಬುದು ಒಬಾಮ ಪಾಲಿಗೆ ನುಂಗಲಾರದ ತುತ್ತು. ಈ ಬೆಳವಣಿಗೆಯಿಂದ ಭಾರತದಲ್ಲಿ ಹೊರಗುತ್ತಿಗೆ ಉದ್ಯೋಗಗಳನ್ನೇ ಅವಲಂಬಿಸಿರುವ ಲಕ್ಷಾಂತರ ಉದ್ಯೋಗಿಗಳು ಮತ್ತು ಐಟಿ ಕಂಪೆನಿಗಳು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಆರ್ಥಿಕ ಬಿಕ್ಕಟ್ಟಿನಿಂದ ಅಮೆರಿಕಾವನ್ನು ಪಾರು ಮಾಡಲು ಅಮೆರಿಕಾದ ಕಂಪೆನಿಗಳು ಹೊರಗುತ್ತಿಗೆ ನೀಡುವುದನ್ನು ನಿಲ್ಲಿಸಬೇಕು ಎಂದು ಒಬಾಮ ಅಧ್ಯಕ್ಷರಾಗಿ ಅಧಿಕಾರವಹಿಸಿಕೊಂಡ ಆರಂಭದಿಂದ ಹೇಳುತ್ತ ಬಂದಿದ್ದರು. ಸರ್ಕಾರದ ನೆರವು ಹಾಗೂ ತೆರಿಗೆ ವಿನಾಯಿತಿ ಪಡೆಯುವ ಕಂಪೆನಿಗಳು ಸಿಬ್ಬಂದಿ ನೇಮಕಾತಿಯಲ್ಲಿ ಅಮೆರಿಕನ್ನರಿಗೆ ಆದ್ಯತೆ ಕೊಡಬೇಕು ಎನ್ನುವುದು ಅವರ ವಾದ. ಅದನ್ನು ಅವರು ದೇಶದ ಮುಂದೆ ಹಲವಾರು ಸಲ ಸಮರ್ಥವಾಗಿ ಮಂಡಿಸಿದ್ದಾರೆ. ಅಮೆರಿಕಾದ ಯುವಕರಿಗೆ ಉದ್ಯೋಗಗಳಲ್ಲಿ ಆದ್ಯತೆ ಸಿಗಬೇಕು ಎನ್ನುವ ಅವರ ವಾದ ಸರಿ. ಆದರೆ ಹೊರಗುತ್ತಿಗೆ ಉದ್ಯೋಗಗಳು ಬಯಸುವ ತಾಂತ್ರಿಕ ಕೌಶಲ್ಯಗಳು ಅಮೆರಿಕಾ ಯುವಕರಿಗೆ ಇಲ್ಲ. ಹೆಚ್ಚಿನ ತಾಂತ್ರಿಕ ಕೌಶಲ್ಯ ಬೇಕಾಗುವ ಉದ್ಯೋಗಗಳನ್ನು ಹೊರಗುತ್ತಿಗೆ ನೀಡದಿದ್ದರೆ ಅಮೆರಿಕಾ ಕಂಪೆನಿಗಳಿಗೆ ನಷ್ಟವಾಗುತ್ತದೆ ಎಂದು ಭಾರತೀಯ ಐಟಿ ಕ್ಷೇತ್ರದ ಗಣ್ಯರು ಹೇಳುತ್ತ ಬಂದಿದ್ದರು. ಅದು ನಿಜ ಎನ್ನುವುದು ಅಮೆರಿಕಾದ ಸೆನೆಟ್ ಸದಸ್ಯರಿಗೆ ಮನದಟ್ಟಾಗಿದೆ. ಭಾರತೀಯರಿಗೆ ಹೊರ ಗುತ್ತಿಗೆ ಉದ್ಯೋಗಗಳನ್ನು ನೀಡುವುದನ್ನು ನಿರಾಕರಿಸುವ ಕ್ರಮಗಳನ್ನು ಕೈಬಿಟ್ಟು ತಮ್ಮ ದೇಶದ ಯುವಕರಲ್ಲಿ ತಾಂತ್ರಿಕ ಕೌಶಲ್ಯ ಬೆಳೆಸುವ ಶಿಕ್ಷಣ ನೀಡುವುದಕ್ಕೆ ಒಬಾಮ ಆಡಳಿತ ಗಮನ ಹರಿಸಬೇಕಿದೆ.

ಅಮೆರಿಕಾದ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳು ಭಾರತೀಯ ಐಟಿ ಕಂಪೆನಿಗಳ ಮೇಲೆ ಆಗಿತ್ತು. ಎರಡು ವರ್ಷಗಳ ಹಿಂದೆ ವಿಶ್ವ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳನ್ನು ಎದುರಿಸುವ ಕ್ರಮವಾಗಿ ಭಾರತೀಯ ಐಟಿ ಕಂಪೆನಿಗಳು ತಮ್ಮ ನಿರ್ವಹಣಾ ವೆಚ್ಚ ಕಡಿಮೆ ಮಾಡಲು ಕೈಗೊಂಡ ಕ್ರಮಗಳಿಂದ ಸಾವಿರಾರು ಜನರು ಉದ್ಯೋಗ ಕಳೆದುಕೊಂಡರು. ಭಾರತೀಯ ಐಟಿ ಕ್ಷೇತ್ರದ ಬೆಳವಣಿಗೆ ಸ್ಥಗಿತಗೊಳ್ಳುವ ಹಂತಕ್ಕೆ ಬಂದಿದೆ ಎಂಬ ಭಾವನೆ ವ್ಯಾಪಕವಾಗಿ ಬೆಳೆದಿತ್ತು. ಐಟಿ ಶಿಕ್ಷಣ ಪಡೆದವರಿಗೆ ಭವಿಷ್ಯವೇ ಇಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಒಬಾಮ ಅವರ ಪ್ರಸ್ತಾವಗಳಿಗೆ ಒಪ್ಪಿಗೆ ಸಿಕ್ಕಿದ್ದರೆ ಭಾರತೀಯ ಐಟಿ ಬೆಳವಣಿಗೆ ಮೇಲೆ ಯಾವ ಪರಿಣಾಮ ಆಗುತ್ತಿತ್ತು ಎನ್ನುವುದನ್ನು ಈಗ ಹೇಳಲಾಗದು. ಆದರೆ ಭಾರತೀಯ ಐಟಿ ಪ್ರತಿಭಾವಂತರು ಅಮೆರಿಕಾದಲ್ಲಿ ಉದ್ಯೋಗ ಪಡೆಯುವುದು ಕಷ್ಟವಾಗುತ್ತಿತ್ತು. ಹೊರಗುತ್ತಿಗೆ ಸೇವೆಗಳಲ್ಲಿದ್ದ ಇನ್ನಷ್ಟು ಮಂದಿ ಉದ್ಯೋಗ ಕಳೆದುಕೊಳ್ಳುತ್ತಿದ್ದರು. ಒಟ್ಟಾರೆ ದೇಶದ ಆರ್ಥಿಕ ಬೆಳವಣಿಗೆ ಮೇಲೆ ಪ್ರತಿಕೂಲ ಪರಿಣಾಮ ಆಗುತ್ತಿತ್ತು. ಸದ್ಯ ಹಾಗೇನೂ ಆಗಲಿಲ್ಲ ಎನ್ನುವುದು ಸಮಾಧಾನದ ಸಂಗತಿ. ಹೊರಗುತ್ತಿಗೆ ಉದ್ಯೋಗಗಳನ್ನು ಅನ್ಯ ದೇಶಗಳಿಗೆ ನೀಡದ್ದರೆ ಅಮೆರಿಕಾದ ಕಂಪೆನಿಗಳಿಗೆ ಹಾನಿಯಾಗುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಡುವಲ್ಲಿ ಭಾರತೀಯ ಲಾಬಿ ಯಶಸ್ವಿಯಾಗಿದೆ. ಅಮೆರಿಕಾದ ಎರಡೂ ರಾಜಕೀಯ ಪಕ್ಷಗಳ ಮೇಲೆ ಪ್ರಭಾವ ಬೀರುವಷ್ಟರ ಮಟ್ಟಿಗೆ ಲಾಬಿ ಕೆಲಸ ಮಾಡಿದೆ. ಈ ಬೆಳವಣಿಗೆ ಸ್ವಾಗತಾರ್ಹ.

ಭಾರತ ಅದರಲ್ಲೂ ಬೆಂಗಳೂರಿನ ಐಟಿ ಕ್ಷೇತ್ರದ ಪ್ರತಿಭಾವಂತರು ಅಮೆರಿಕಾಕ್ಕೆ ಸವಾಲಾಗಿದ್ದಾರೆ ಎಂದು ಒಬಾಮ ತಮ್ಮ ದೇಶದ ವಿದ್ಯಾರ್ಥಿಗಳು ಹಾಗೂ ಯುವಜನರನ್ನು ಉದ್ದೇಶಿಸಿ ಮಾತನಾಡುವ ಸಂದರ್ಭದಲ್ಲೆಲ್ಲ ಹೇಳುತ್ತ ಬಂದಿದ್ದಾರೆ. ದೇಶದ ಆರ್ಥಿಕ ಬಿಕ್ಕಟ್ಟಿನ ನಿವಾರಣೆ ಹೆಸರಿನಲ್ಲಿ ಭಾರತೀಯರಿಗೆ ಅಮೆರಿಕಾದಲ್ಲಿ ಉದ್ಯೋಗ ನಿರಾಕರಿಸುವ ಹೊಸ ಉಪಕ್ರಮಗಳಿಗೆ ಅವರು ಮುಂದಾಗುತ್ತಾರೆ. ಅದು ಸಹಜ. ಸಂಭವನೀಯ ಸವಾಲುಗಳನ್ನು ಎದುರಿಸಲು ಭಾರತೀಯ ಐಟಿ ಕ್ಷೇತ್ರ ಸನ್ನದ್ಧವಾಗಿರಬೇಕು.

■ ಪಿ.ಕೆ. ಹರಿಯಬ್ಬೆ

ಒಬಾಮ ಅವರ ಪ್ರಸ್ತಾವಗಳಿಗೆ ಒಪ್ಪಿಗೆ ಸಿಕ್ಕಿದ್ದರೆ ಭಾರತೀಯ ಐಟಿ ಬೆಳವಣಿಗೆ ಮೇಲೆ ಯಾವ ಪರಿಣಾಮ ಆಗುತ್ತಿತ್ತು ಎನ್ನುವುದನ್ನು ಈಗ ಹೇಳಲಾಗದು. ಆದರೆ ಭಾರತೀಯ ಐಟಿ ಪ್ರತಿಭಾವಂತರು ಅಮೆರಿಕಾದಲ್ಲಿ ಉದ್ಯೋಗ ಪಡೆಯುವುದು ಕಷ್ಟವಾಗುತ್ತಿತ್ತು. ಹೊರಗುತ್ತಿಗೆ ಸೇವೆಗಳಲ್ಲಿದ್ದ ಇನ್ನಷ್ಟು ಮಂದಿ ಉದ್ಯೋಗ ಕಳೆದುಕೊಳ್ಳುತ್ತಿದ್ದರು. ಒಟ್ಟಾರೆ ದೇಶದ ಆರ್ಥಿಕ ಬೆಳವಣಿಗೆ ಮೇಲೆ ಪ್ರತಿಕೂಲ ಪರಿಣಾಮ ಆಗುತ್ತಿತ್ತು. ಸದ್ಯ ಹಾಗೇನೂ ಆಗಲಿಲ್ಲ ಎನ್ನುವುದು ಸಮಾಧಾನದ ಸಂಗತಿ.

